**ದಿನಾಂಕಃ16.07.2026 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**
**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಟಿ.ಎಸ್. ವಕೀಲರಿಂದಃ–**

ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿ 1 ರಿಂದ 6 ರವರ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ಬಾದಾ ಕರಿಯಪ್ಪರವರಿಗೆ ನಾಲ್ಕು ಜನ ಗಂಡು ಮಕ್ಕಳು ಎಂದರೆ ಸರಿ. ಬಾದಾ ಕರಿಯಪ್ಪನ ಗಂಡು ಮಕ್ಕಳು ಎಂದರೆ ಸಣ್ಣ ಚಿತ್ತಪ್ಪ, ಕರಿಯಪ್ಪ, ಕರಿಚಿತ್ತಪ್ಪ, ಸಣ್ಣ ಕರಿಯಪ್ಪ ಎಂದರೆ ಸರಿ. ಸರ್ವೆ ನಂ. 81 ರ 21 ಎಕರೆ ಸ್ವತ್ತು 1982–83 ನೇ ಸಾಲಿನಲ್ಲಿ ಪಾಲು ಪಾರಿಕತ್ ನಂತೆ 4 ಭಾಗ ಆಗಿದೆ ಎಂದರೆ ಸರಿ. ಬಾದಾ ಕರಿಯಪ್ಪ ನ 4 ಜನ ಮಕ್ಕಳಿಗೂ ತಲಾ 5 ಎಕರೆ 12 ಗುಂಟೆ ಸ್ವತ್ತು ಬಂದಿದೆ ಎಂದರೆ ಸರಿ. ಸರ್ವೆ ನಂ.81 ಒಟ್ಟು 7 ಪೋಡಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿಯು ನಾನು ಸರ್ವೆ ನಂ.81/9 ರ 1 ಎಕರೆ 6 ಗುಂಟೆ ಸ್ವತ್ತನ್ನು ಖರೀದಿಸಿದ್ದೇನೆ ಆ ಕಾರಣ 9 ಪೋಡಿ ಆಗಿದೆ ನನಗೆ ಗೊತ್ತು ಎಂದು ನುಡಿಯುತ್ತಾರೆ.

ಸದರಿ 4 ಜನ ಮಕ್ಕಳು ತಮ್ಮ ತಮ್ಮ ಪ್ರತ್ಯೇಕ ಸ್ವತ್ತಿಗೆ ಓಡಾಡಲು ದಾರಿ ಬಿಟ್ಟುಕೊಂಡಿದ್ದಾರೆ ಎಂದರೆ ಸರಿ. ಕರಡು ನಕಾಶೆಯಂತೆ ಪೂರ್ವ ದಿಕ್ಕಿನಿಂದ 1 ನೇ ಪೋಡಿ ಉತ್ತರ ದಿಕ್ಕಿನ ಅಂಚಿನಲ್ಲಿ ದಾರಿಯನ್ನು ಬಿಟ್ಟುಕೊಂಡಿದ್ದಾರೆ ಎಂದರೆ ಸರಿ. ಅದೇ ರೀತಿ ಪಶ್ಚಿಮ ದಿಕ್ಕಿನ ಮಧ್ಯದ ಬದುವಿನ ಪೂರ್ವದಲ್ಲಿ ದಾರಿಯನ್ನು ಬಿಟ್ಟುಕೊಂಡಿದ್ದಾರೆ ಎಂದರೆ ಸರಿಯಲ್ಲ. 1,2, 3 ಮತ್ತು 4 ನೇ ಪೋಡಿ ಮೂಲಕ 6 ಮತ್ತು 7 ಪೋಡಿಗೆ ಹೋಗಲು ದಾರಿ ಇದೆ ಎಂದರೆ ಸರಿಯಲ್ಲ. ಸರ್ವೆ ನಂ.81 ರ 21 ಎಕರೆ ಸಮತಟ್ಟಾಗಿದೆಯಾ ಎಂದರೆ ಮುಂಚೆ ಹಳ್ಳ ಇತ್ತು ಈಗ ವಾದಿಗಳೇ ಮಣ್ಣು ಮುಚ್ಚಿ ಸಮ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ಸರ್ವೆ ನಂ.81/4 ಜಮೀನಿಗೆ ಪೂರ್ವದಿಂದ ಪಶ್ಚಿಮಕ್ಕೆ ದಾರಿ ಇದೆ ಎಂದರೆ ಸರಿಯಲ್ಲ. ಕರಡು ನಕಾಶೆಯಂತೆ ಸರ್ವೆ ನಂ.81/1, 81/2, 81/3, 81/4, ರ ಪೂರ್ವ ದಿಕ್ಕಿನ ಪಶ್ಚಿಮ ಬದುವಿಗೆ ದಾರಿ ಇದೆ ಎಂದರೆ ಜಮೀನಿನ ಒಳಗೆ ಇಲ್ಲ ಸುತ್ತಲು ಇದೆ ಎಂದು ನುಡಿಯುತ್ತಾರೆ.

1982–23 ರ ಸಾಲಿನ ಪಾಲು ಪಾರೀಕತ್ ನಂತೆ ಎಲ್ಲಾ ಪಾಲುದಾರರಿಗೂ ಓಡಾಡಲು ದಾರಿ ಇದೆ ಎಂದರೆ ಜಮೀನಿನ ಹೊರಗೆ ಇದೆ ಒಳಗೆ ಇಲ್ಲ ಎಂದು ಸಾಕ್ಷಿಯು ಮತ್ತೆ ನುಡಿಯುತ್ತಾರೆ. ಇವತ್ತಿಗೂ ಸಹ ವಾದಿ ಮತ್ತು ಪ್ರತಿವಾದಿಯವರು ಅವರವರ ಆ ಜಮೀನಿನ ಒಳಗೆ ದಾರಿ ಮಾಡಿಕೊಂಡು, ಉಪಯೋಗಿಸಿಕೊಂಡು ಓಡಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಯು ಒಳಗೆ ಯಾವುದೇ ದಾರಿ ಇಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂ.81 ರಲ್ಲಿ 7 ಪೋಡಿಗಳು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಎ ಶೆಡ್ಯೂಲ್ ಐಟಂ ನಂ.1 ಮತ್ತು 2 ರ ಸ್ವತ್ತರಲ್ಲಿ ವಾದಿಯು ಮಾಲೀಕರಾಗಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಬಿ ಶೆಡ್ಯೂಲ್ ನ ಐಟಂ ನಂ. 1 ಮತ್ತು 2 ರ ಸ್ವತ್ತಿನಲ್ಲಿ ಪ್ರತಿವಾದಿ 4 ಮತ್ತು 5 ರವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ.

ದಾವಾ ಸ್ವತ್ತು ಬಿ ಶೆಡ್ಯೂಲ್ ನ ಐಟಂ ನಂ. 3 ಮತ್ತು 4 ರ ಸ್ವತ್ತಿನಲ್ಲಿ ಪ್ರತಿವಾದಿ 1 ರಿಂದದ 3 ರವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಶಿವಣ್ಣ ಮತ್ತು ನಾನು ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಬಿ ಶೆಡ್ಯೂಲ್ ನ ಐಟಂ ನಂ 5 ರಲ್ಲಿ ಪ್ರತಿವಾದಿ 6 ರವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಅದೇ ರೀತಿ ತಮ್ಮ ತಮ್ಮ ಸ್ವತ್ತುಗಳಲ್ಲಿ ವಾದಿ ಮತ್ತು ಪ್ರತಿವಾದಿಗಳು ತಮ್ಮ ತಮ್ಮ ಸ್ವತ್ತಿನಲ್ಲಿ ಜಮೀನಿನ ಒಳಗೆ ದಾರಿ ಬಿಟ್ಟುಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿಯು ಸರ್ವೆ 81/7 ರ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

(ಈ ಸಮಯದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಈಗ ಸಮಯವು ಮಧ್ಯಾಹ್ನ 1.20 ಗಂಟೆ ಆಗಿದ್ದು, ಯಾವುದೇ ಸಕಾರಣ ಇಲ್ಲದ ಕಾರಣ ಅವರ ಪ್ರಾರ್ಥನೆಯನ್ನು ತಿರಸ್ಕರಿಸಿ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.